ಸ್ವಲ್ಪ ಹಣ ಸಂಪಾದಿಸಲು ಒಣ ಎಲೆಗಳನ್ನು ದೊನ್ನೆ ಮಾಡಿ ಮಾರಿದ್ದ. ಆದರೆ ಆ ವ್ಯಾಪಾರಿ ಔದಾರ್ಯವನ್ನು ತೋರಿಸುತ್ತಾ, ಒಣ ಎಲೆಗಳನ್ನು ಸಂಗ್ರಹಿಸುತ್ತಿದ್ದ ಓರ್ವ ವೃದ್ಧೆಯ ವಿಳಾಸವನ್ನು ಹೇಳಿದ.

ಆದರೆ ಅದೃಷ್ಟ ಅಲ್ಲಿಯೂ ಅವರಿಗೆ ಕೈಕೊಟ್ಟಿತು. ಆ ವೃದ್ಧೆ ಎಲೆಗಳನ್ನು ಬೇರ್ಪಡಿಸಿ ಅನೇಕ ಔಷಧಗಳನ್ನು ತಯಾರಿಸಿದ್ದಳು. ಕಡೆಗೆ ಆ ಮೂವರು ಶಿಷ್ಯರು ನಿರಾಸೆಯಿಂದ ಬರಿಗೈಯಲ್ಲಿ ಗುರುಕುಲಕ್ಕೆ ಮರಳಿ ಬಂದರು. ಗುರುಗಳು ಅವರನ್ನು ನೋಡುತ್ತಲೇ ಸ್ನೇಹದಿಂದ ಕೇಳಿದರು, ಮಕ್ಕಳೇ, ಗುರುದಕ್ಷಿಣೆಯನ್ನು ತಂದಿರಾ? ಮೂವರೂ ತಲೆ ತಗ್ಗಿಸಿದರು. ಗುರುಗಳು ಮತ್ತೆ ಪ್ರಶ್ನಿಸಿದಾಗ ಒಬ್ಬ ಶಿಷ್ಯ ಹೇಳಿದ, ಗುರುದೇವ, ನಾವು ನಿಮ್ಮಿಚ್ಛೆಯನ್ನು ಈಡೇರಿಸದಾದೆವು. ಒಣ ಎಲೆಗಳು ಕಾಡಿನಲ್ಲಿ ಅನಾಯಾಸವಾಗಿಯೇ ಲಭಿಸುತ್ತವೆ ಎಂದು ನಾವು ಯೋಚಿಸಿದ್ದೆವು, ಆದರೆ ಅವುಗಳನ್ನೂ ಎಷ್ಟು ವಿಧದಲ್ಲಿ ಉಪಯೋಗಿಸುತ್ತಾರೆ ಎಂಬುದನ್ನು ನೋಡಿ ನಮಗೆ ತುಂಬಾ ಆಶ್ಚರ್ಯವಾಯಿತು.

ಗುರುಗಳು ಈ ಹಿಂದಿನಂತೆಯೆ ಮುಗುಳ್ನಗುತ್ತಾ ಹೇಳಿದರು, ನೀವೇಕೆ ನಿರಾಸೆ ತಾಳುವಿರಿ? ಒಣ ಎಲೆಗಳೂ ಸಹ ವ್ಯರ್ಥವಾಗುವುದಿಲ್ಲ ಎಂಬುದು ಇದರಿಂದ ತಿಳಿಯುತ್ತದೆ. ನನಗೆ ನನ್ನ ಗುರುದಕ್ಷಿಣೆ ಸಿಕ್ಕಿತು.





# ಅಜ್ಜಿ ಕಾದಿಹಳು

■ **ಚಂದನ ಜಿ.ಪಿ., ಹೊನ್ನಾಳಿ**

ಚಿತ್ರ: ಮಂಜುನಾಥ ಹುಲಕೊಪ್ಪದ

ಬಾಗಿದ ಬೆನ್ನು ಸವೆದ ಸೀರೆ
ತಲೆಯ ಮೇಲೆ ಮುಸುಕನು ಹೊತ್ತು
ಅಂಗಳಕ್ಕೊಮೆ ಹಿತ್ತಲಿಗೊಮ್ಮೆ
ಅಜ್ಜಿ ನಡೆದಿಹಳು

ಸೂರ್ಯನ ನೆರಳಲೇ ವೇಳೆಯ ಊಹಿಸಿ
ಘಮ್ಮೆನ್ನುವ ಗೋಧಿ ಪಾಯಸ ಕುದಿಸಿ
ಬಸ್ಸು ಬರುವ ದಾರಿಯ ನೋಡುತ
ಮೊಮ್ಮಗನ ಕಾದಿಹಳು

ಬಸ್ಸು ಬರದೇ ಚಡಪಡಿಸಿ
ಪಕ್ಕದ ಮನೆಯಿಂದ ಫೋನಾಯಿಸಿ
ಬಾರದೇ ಎಲ್ಲಿ ಇರುವೆಯೋ ಕಂದ
ತಡವಾಯಿತೇ ಬಸ್ಸು ಎನುತಿಹಳು

ಅಜ್ಜಿ ಕೇಳು, ಗೆಳೆಯರ ಕೂಡಿ
ಹೋಗಿಹೆ ನಾನು ಹೊರಗೆಲ್ಲೋ
ಊಟವ ಮಾಡಿ ಮಲಗಿಕೊ ನೀನೂ
ಕಾಯದೆ ನನ್ನ ದಾರಿಯನು

ಪರೀಕ್ಷೆ ಮುಗಿದೊಡೆ ಹಾಜರಿಯಿದ್ದ
ಅಜ್ಜಿಯ ಮನೆಯ ದಾರಿಯ ಮರೆತೆ
ದೊಡ್ಡವನಾದೆ ನೀನಿನ್ನೂ
ಅಜ್ಜಿಯು ಕೋಪದಿ ಗದರಿದಳು

ಫೋನನ್ನು ಇಡುವ ಮುಂಚೆಯೇ ತಾನು
ಧೂಳನೂ ಹರಡುವ ಪೊಂ ಪೊಂ ಮಾಡುವ
ಬಸ್ಸಿಂದಿಳಿದ ಮೊಮ್ಮಗನ ಕಂಡು
ದೃಷ್ಟಿ ತೆಗೆಯಲು ಓಡಿದಳು

■

**ಎಳೆಯರ ಅಂಗಳಕ್ಕೆ ಕಥೆ, ಕವಿತೆಗಳನ್ನು ಕಳುಹಿಸಬಹುದು.**
**ನಿಮ್ಮ ಬರಹಗಳು ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.**
**ಇಮೇಲ್:** E-Mail: editorsu@sudha.co.in